PRESENTATION OF PETITION

ಶ್ರೀ ಎಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೇ ಟಿ. ನರಸೀಪುರದ ತಾಲ್ಲೂಕು ಕೆಂಪೇಗೌಡನ ಕೊಪ್ಪಲಿನಲ್ಲಿ ಸೈಟುಗಳ ವಿತರಣೆಯ ಬಗ್ಗೆ ಗ್ರಾಮಸ್ಥರು ಸಹಿ ಮಾಡಿದ ಮನವಿಯನ್ನು ಸಭೆಗೆ ಒಪ್ಪಿಸ ಬಯಸುತ್ತೇನೆ.

ಅಧ್ಯಕ್ಷರು.—ಮನವಿಯನ್ನು ಒಪ್ಪಿಸಿದರು.

ಶ್ರೀ ಗಟ್ಟಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ ಅಂದಾಜು ಸಮಿತಿಯ ಅಧ್ಯಕ್ಷನಾದ ನಾನು ಸಣ್ಣ ನೀರಾವರಿಗೆ ಸಂಬಂಧಪಟ್ಟ ಹಾಗೆ ಅಂದಾಜುಗಳ ಮೇಲೆ ಸಮಿತಿಯ ಎರಡನೆಯ ವರದಿಯನ್ನು ಸಭೆಗೆ ಒಪ್ಪಿಸಬಯಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಿದರು.

x x x x x

Abolition of Lok Ayukt

SRI A. LAKSHMISAGAR (Chickpet).—Sir, the Hon. Chief Minister was good enough to tell this Hon. House some time ago that the Lokayukt will not be revived and that he was going to revive the Vigilance Commission. The present position is that there is neither the Lok Ayukt nor the Vigilance Commission in existence. I should like to know from the Hon. Chief Minister whether the Government is been on proceeding against Government servants for corupt practices and mal-administration and also against public men. What is the thinking of the Government in this behalf ?

SRI R. GUNDU RAO.—The vigilance Commission is very much there. The Director and others are there. ವಿಜಿಲೆನ್ಸ್ ಕಮಿಷನ್ ಬಗ್ಗೆ ಈಗಾಗಲೇ ಹೇಳಿರುತ್ತೇನೆ. ಈ ಲೋಕಾಯುಕ್ತವನ್ನು ತರಾತುರಿಯಿಂದ ತಂದ ಉದ್ದೇಶವೇ ಬೇರೆ. ಆ ಉದ್ದೇಶ ಈಡೇರಲಿಲ್ಲ. ವಿಜಿಲೆನ್ಸ್ ಕಮಿಷನರ್ ಆಗಿ ಹೈಕೋರ್ಟಿನ ನ್ಯಾಯಾಧೀಶರನ್ನು ನೇಮಕ ಮಾಡಬೇಕಾಗಿರುವುದರಿಂದ ಹೆಸರನ್ನು ಕಳುಹಿಸಲು ಹೈಕೋರ್ಟಿಗೆ ಬರೆದಿರುತ್ತೇವೆ. ಅಲ್ಲಿಂದ ಹೆಸರು ಬಂದ ಕೂಡಲೇ ನೇಮಕ ಮಾಡುತ್ತೇವೆ.

SRI A. LAKSHMISAGAR.—The Vigilance Commission is not functioning as per law. I want to know what is the thinking of the Government in this matter.

SRI R. GUNDU RAO.—I have already stated that in place of Lokayukt the Vigilance Commission is there. A High Court Judge will be there. It will be revived,

SRI A. LAKSHMISAGAR.—How soon ?

SRI R. GUNDU RAO.—As early as possible.

ಶ್ರೀ ಎಸ್.ಆರ್. ಬೊಮ್ಮಾಯಿ —ಲೋಕಾಯುಕ್ತ ಬಿಲ್ಲನ್ನು ತೆಗೆದುಹಾಕದೆ ಮುಂದುವರಿಸಿದ್ದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ವಿರೋಧಪಕ್ಷದ ನಾಯಕರು ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇದರ ಬಗ್ಗೆ ರಾಜ್ಯಪಾಲರನ್ನು ಭೇಟಿಮಾಡಿ ಪತ್ರವನ್ನೂ ಕೂಡ ಬರೆದಿರುತ್ತಾರೆ. ನಾನೂ ಕೂಡ ಬರೆದಿರುತ್ತೇನೆ. ಲೋಕಾಯುಕ್ತ ಸಂಸ್ಥೆಯನ್ನು ತರತಕ್ಕಂಥ ಉದ್ದೇಶದಲ್ಲಿ ನಂಬಿಕೆ ಉಳ್ಳವರಲ್ಲಿ ನಾನು ಒಬ್ಬನಾಗಿದ್ದೇನೆ. ಏತಕ್ಕೆಂದರೆ ಸಾರ್ವಜನಿಕ ಜೀವನದಲ್ಲಿ ಶಾಸಕರ ಭ್ರಷ್ಟಾಚಾರ ವಿಚಾರಣೆ

ಯಾಗಬೇಕು ಎನ್ನುವ ಸದುದ್ದೇಶದಿಂದ ಇದನ್ನು ತರಬೇಕೆಂದು ಹೇಳುತ್ತೇನೆ. ಇದರಲ್ಲಿ ಯಾವ ವಿಧವಾದ ರಾಜಕೀಯ ಉದ್ದೇಶದಿಂದ ಕೂಡಿರದೆ ಸ್ವಚ್ಛವಾದ ಸಮಗ್ರವಾದ ಪರಿಶೀಲನೆ ಮಾಡತಕ್ಕಂಥ ಲೋಕಾಯುಕ್ತ ಬಿಲ್ಲನ್ನು ತರತಕ್ಕಂಥ ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್. – ಮಾನ್ಯ ಸದಸ್ಯರು ಏನು ಹೇಳಿರುತ್ತಾರೆ ಆದನ್ನು ನಾನು ಪೂರ್ತಿಯಾಗಿ ಒಪ್ಪಿಕೊಂಡಿದ್ದೇನೆ. ವಿರೋಧಪಕ್ಷದ ನಾಯಕರು, ನಾವು ಎಲ್ಲರೂ ಕುಳಿತು ಆಲೋಚನೆ ಮಾಡಿ ಯಾವ ಒಂದು ದುರುದ್ದೇಶವಿಲ್ಲದ ಸಮಗ್ರವಾದ ಕಾನೂನು ತರುವುದಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಹೇಳಬಯಸುತ್ತೇನೆ.

ಶ್ರೀ ಬಿ.ವಿ. ಕಕ್ಕಿಲಾಯ.—ಮಾನ್ಯ ಅಧ್ಯಕ್ಷರೇ ನಾನು ಒಂದು ಕಾಲಿಂಗ್ ಅಟೆಂಷನ್ ನೋಟಿಸನ್ನು ಕಳುಹಿಸಿಕೊಟ್ಟಿದ್ದೆ. ಅದೇನೆಂದರೆ ಚಿಕ್ಕಮಗಳೂರುನಲ್ಲಿ ಒಬ್ಬ ಹರಿಜನ ಮಹಿಳೆಯ ಮೇಲೆ ಒಬ್ಬ ಪೋಲೀಸ್ ಪೇದೆಯು ಅತ್ಯಾಚಾರ ಮಾಡಿರತಕ್ಕಂಥ ವಿಷಯವಾಗಿರುತ್ತದೆ. ಈ ವಿಷಯ ಡೆಲ್ಲಿಯ ಒಂದು ಪತ್ರಿಕೆಯಲ್ಲೂ ಕೂಡ ಬಂದಿರುತ್ತದೆ. ಆದ್ದರಿಂದ ಇದರ ಬಗ್ಗೆ ಸರ್ಕಾರದವರು ಪೂರ್ಣ ಮಾಹಿತಿಯನ್ನು ಒದಗಿಸಿದರೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರು.—ಏನು ತಾವು ಕಳುಹಿಸಿದ್ದೀರಿ ನಾನು ನೋಡುತ್ತೇನೆ.

SRI B.B. SAYANAK —Sir, the Hon. Minister for Health has already replied to my Calling Attention Notice in regard to the Homeopathic College, Belgaum, Now he has called a Meeting of the Management, the Professors and the students. But that decision has not been conveyed to the students and the professors. He had assured me on the floor of this House that he would call me also to that Meeting. But he has not done so. The agitation is going on still. I want that the Chief Minister should interfere and take a correct decision so that this matter will be over.

SRI R. GUNDU RAO.—I think, the Hon. Minister for Health is looking into the matter. Any way since the hon. Member wants me to interfere, in the matter, and do justice, I will look into it.

Strike by Junior doctors at Mysore.

ಶ್ರೀ ಡಿ ಜಯದೇವರಾಜ್ ಅರಸ್.—ಮಾನ್ಯ ಅಧ್ಯಕ್ಷರೇ. ತುರ್ತಾಗಿ ಸರ್ಕಾರದ ಗಮನಕ್ಕೆ ಒಂದು ವಿಷಯವನ್ನು ತರುತ್ತಿದ್ದೇನೆ. ಅದು ಮೈಸೂರು ನಗರದಲ್ಲಿ ಹಲವಾರು ಜನರನ್ನು ಪೋಲಿಸರು ಅರೆಸ್ಟ್ ಮಾಡಿದ್ದಾರೆ, ಕೆಲವರನ್ನು ಜೈಲಿಗೆ ಹಾಕಿದ್ದಾರೆ ಇದು ಆಸ್ಪತ್ರೆಗೆ ಸಂಬಂಧಪಟ್ಟಿರುವುದರಿಂದ ಸರ್ಕಾರ ಇದರ ಬಗ್ಗೆ ಒಂದು ನೀತಿಯನ್ನು ನಿರೂಪಿಸಬೇಕು. ಇದು ಹೆಚ್ಚು ಗೊಂದಲವಾಗದ ರೀತಿಯಲ್ಲಿ ನೋಡಿಕೊಳ್ಳಬೇಕು. ಜೊತೆಗೆ ಸುಮಾರು ರೋಗಿಗಳು ಇರುವ ಕಡೆ ಈ ರೀತಿಯಾದರೆ ಬಹಳ ಜನರಿಗೆ ತೊಂದರೆಯಾಗುತ್ತದೆ ಆದ್ದರಿಂದ ದಯಮಾಡಿ ಇದರ ಬಗ್ಗೆ ಏನು ಜರೂರು ಕ್ರಮ ತೆಗೆದು ಕೊಳ್ಳುತ್ತಾರೋ ತಿಳಿಸಬೇಕು. ಇದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಮತ್ತೊಂದು ವಿಷಯ ಈ ದೇಶದಲ್ಲಿ ತಾವು ದಯವಿಟ್ಟು ಒಬ್ಬ ಎಂಎಲ್ಎ ಯವರು ಖಿದ್ದು ಹಾಜರಿರ ಬೇಕೆಂದು ಕೋರಿದೆ ಎಂದು ಸನ್ಮಾನ ಸಮಾರಂಭಕ್ಕೆ ಕರೆಯುವ ಪರಿಸ್ಥಿತಿಯಲ್ಲಿ ಕಾಗದ ಬರೆಯುವುದಾದರೆ ಇದಕ್ಕೆ ನಾವು ಏನು ಹೇಳಬೇಕೋ ತಿಳಿಯದು ಇದನ್ನು ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೇ, ಈಗ ಮೈಸೂರು ಮತ್ತು ಇನ್ನಿತರ ಕಡೆಗಳಲ್ಲಿ ಏನು ಜೂನಿಯರ್ ಡಾಕ್ಟರ್ಸ್‌ಗಳು ಸ್ಟ್ರೈಕ್ ಮಾಡುತ್ತಿದ್ದಾರೆ ಅದರ ಬಗ್ಗೆ, ಮಾನ್ಯ ಆರೋಗ್ಯ ಮಂತ್ರಿಗಳು ಏನೋ ಸಂಧಾನ ನಡೆಸಿ ಮುಷ್ಕರವನ್ನು ನಿಲ್ಲಿಸುವ ಏರ್ಪಾಡು ಮಾಡಿದ್ದಾರೆಂದು ತಿಳಿದು ಅವರನ್ನು

ಅಭಿನಂದಿಸುವುದಕ್ಕೆ ಇಷ್ಟಪಡುತ್ತೇನೆ, ಇನ್ನು ನಮ್ಮ ಮೈಸೂರು ನಗರದಲ್ಲಿ ಮಾತ್ರ ಐನೂರು ಆರುನೂರು ಜೂನಿಯರ್ ಡಾಕ್ಟರ್ಸ್ ಸ್ಟ್ರೈಕ್ ಮಾಡುತ್ತಾ ಇದ್ದಾರೆ ಅದರಲ್ಲಿ ಕೆಲವು ಲೇಡಿ ಡಾಕ್ಟರ್ ಗಳನ್ನು ಅರೆಸ್ಟ್ ಮಾಡಿದ್ದಾರೆ ಜೊತೆಗೆ ಅವರನ್ನು ಮತ್ತೆ ಬೇಲ್ ಮೇಲೆ ಕೂಡ ಬಿಡದೆ ಹೋದರೆ ಹೇಗೆ? ಅಲ್ಲಿ ಕೆಲವು ಸಮಸ್ಯೆಗಳಿವೆ. ಜೊತೆಗೆ ನಿರುದ್ಯೋಗ ಸಮಸ್ಯೆಗಳು ಇರುವುದರಿಂದ ಈ ರೀತಿ ಮುಷ್ಕರ ನಡೆಯುತ್ತಿರುತ್ತವೆ, ಇದು ಕೇವಲ ಒಂದೆರಡು ಕಡೆ ನಡೆಯುತ್ತಿಲ್ಲ ಇಡೀ ರಾಜ್ಯದಲ್ಲಿ ನಡೆಯುತ್ತಿರುವುದರಿಂದ ಕೇವಲ ಬೆಂಗಳೂರಿನಲ್ಲಿ ಮುಷ್ಕರ ನಡೆಸುವುದನ್ನು ಸಂಧಾನ ನಡೆಸಿ ನಿಲ್ಲಿಸಿದ್ದಾರೆ ಅದೇ ರೀತಿ ಎಲ್ಲಾ ಕಡೆಯಲ್ಲಿಯೂ ಸಂಧಾನ ನಡೆಸಿ ಎಲ್ಲಾ ಕಡೆಯೂ ಮುಷ್ಕರವನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡ ಬೇಕೆಂದು ಮಾನ್ಯ ಆರೋಗ್ಯ ಮಂತ್ರಿಗಳಲ್ಲಿ ಹಾಗೂ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರು ಜೂನಿಯರ್ ವೈದ್ಯರು ಒಂದು ಒಪ್ಪಂದಕ್ಕೆ ಬಂದಿದ್ದಾರೆಂದು ಕೇಳಿದ್ದೇನೆ. ಆದರೆ ಮೈಸೂರು, ದಾವಣಗೆರೆಯಲ್ಲಿ ಹುಬ್ಬಳ್ಳಿ ಮುಂತಾದ ಕಡೆಗಳಲ್ಲಿ ನೂರಾರು ಜನರನ್ನು ಜೊತೆಗೆ ಹೆಣ್ಣುಮಕ್ಕಳನ್ನು ದಸ್ತಗಿರಿ ಮಾಡಿದ್ದಾರೆಂದು ತಿಳಿದು ಬಂದಿದೆ. ಆದ್ದರಿಂದ ದಯವಾಡಿ ಮಾನ್ಯ ಮುಖ್ಯ ಮಂತ್ರಿಗಳು ಅವರನ್ನು ಬಿಡುಗಡೆ ಮಾಡು ವುದಕ್ಕೆ ಆರ್ಡರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಏನು ಅನೇಕ ಮಾನ್ಯ ಸದಸ್ಯರು ಈ ಜೂನಿಯರ್ ವೈದ್ಯರ ಬಗ್ಗೆ ಎತ್ತಿದ್ದಾರೆ ಇದು ಎಲ್ಲಾ ಕಡೆಯಲ್ಲಿಯೂ ಮುಂದುವರಿಯುತ್ತಿರುವುದರಿಂದ ಪರಿಸ್ಥಿತಿ ಉಲ್ಬಣವಾಗು ವುದಕ್ಕೆ ಮೊದಲು ಮಾನ್ಯ ಆರೋಗ್ಯ ಸಚಿವರ ಆದೇಶ ಅವರಿಗೆ ಮುಟ್ಟದೆ ಇರಬಹುದು. ಆದ್ದರಿಂದ ಸಮಗ್ರವಾದ ರೀತಿಯಲ್ಲಿ ಒಂದು ಆಶ್ವಾಸನೆಯನ್ನು ನೀಡಿ ಪರಿಸ್ಥಿತಿಯನ್ನು ಹತೋಟಿಗೆ ಬರುವಂತಹ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಆರ್. ಗುಂಡೂರಾವ್ (ಮಾನ್ಯ ಮುಖ್ಯಮಂತ್ರಿಗಳು).—ಈಗ ನನ್ನ ಗಮನಕ್ಕೆ ತಂದಿದ್ದಾರೆ ಅದನ್ನು ವಿಚಾರ ಮಾಡಿ ಏನು ಮಾಡಬೇಕೆನ್ನುವುದನ್ನು ನೋಡಿ ಮಾಡುತ್ತೇನೆ,

Closure of publication of Samyukta Karnataka

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಅಧ್ಯಕ್ಷರೆ, ನಮ್ಮ ಶಾಸನ ಸಭೆ ನಾಳೆ ಮುಗಿಯುವುದ ರಿಂದ ನಮ್ಮ ಸಂಯುಕ್ತ ಕರ್ನಾಟಕ ಪತ್ರಿಕೆ ಹಾಗೂ ಅದರ ನೌಕರರನ್ನು ಬೀದಿ (ಪುಟ್‌ಪಾತ್)ಯಲ್ಲಿ ಇರುವುದನ್ನು ನೋಡಿಕೊಂಡು ನಾವು ಹೋಗುವುದು ಸರಿಯೇ? ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ, ಈ ಸದನದ ಒಳಗೆ ಮತ್ತು ಹೊರಗೆ ಕೂಡಾ ಆದಷ್ಟು ಬೇಗ ಇದನ್ನು ತೆರೆಯುವ ಹಾಗೆ ಮತ್ತು ಪತ್ರಿಕೆ ಚಾಲು ಆಗುವ ಹಾಗೆ ಮಾಡಿಕೊಡುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ಆದರೆ ೩೦ ದಿವಸಗಳಾದರೂ ಸ್ಟ್ರೈಕ್ ನಡೆಯುತ್ತಲೇ ಇದೆ. ನಾವು ಅವರನ್ನು ಬೀದಿ ಪಾಲು ಮಾಡಿ ಜೊತೆಗೆ ಪತ್ರಿಕೆಯನ್ನು ಚಾಲು ಮಾಡಿಸದೆ ಬಿಟ್ಟುಹೋದರೆ ನಮಗೂ ಮತ್ತು ರಾಜ್ಯಕ್ಕೂ ಒಳ್ಳೆಯದಲ್ಲವೆಂದು ಮಾನ್ಯ ಕಾರ್ಮಿಕ ಮಂತ್ರಿಗಳಲ್ಲಿ ಮತ್ತು ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆಮಾಡಿ ಅದಕ್ಕೆ ಏನು ಮಾಡುತ್ತೀರೆಂದು ತಿಳಿಸಬೇಕೆಂದು, ಏನು ಅವರು ಗುಡಾರ ಹಾಕಿದ್ದಾರೆ ಅದನ್ನು ಎತ್ತಿ ಅವರು ಮನೆಗೆ ಹೋಗಿ ನೆಮ್ಮದಿ ಪಡೆಯುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಇಬ್ರಾಹಿಂ (ಮಾನ್ಯ ಕಾರ್ಮಿಕ ಮಂತ್ರಿಗಳು).—ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ನಾನು ಹೇಳುವುದಾದರೆ ಯಾರನ್ನೂ ಬೀದಿಪಾಲು ಮಾಡಬೇಕೆನ್ನುವುದು ಸರ್ಕಾರದ ಉದ್ದೇಶವಲ್ಲ, ಈಗಾಗಲೇ ೭-೮ ಮೀಟಿಂಗ್‌ಗಳು ನಡೆದಿವೆ, ಇದರಲ್ಲಿ ಲೀಗಲ್ ಕಾಂಪ್ಲಿಕೇಷನ್ ಗಳು ಇವೆ ಇವುಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ನಾವು ತೀವ್ರವಾಗಿ ವಿಚಾರಮಾಡುತ್ತಿದ್ದೇವೆ. ನಿಮಗೆ ಏನು ಕಳಕಳಿ ಇದೆ ಅಷ್ಟೇ ಕಳಕಳಿ ಸರ್ಕಾರಕ್ಕೂ ಇದೆ ಜೊತೆಗೆ ಏನು ಎರಡು ಕಡೆ ಪತ್ರಿಕೆ ಕಾರ್ಯಾಲಯಗಳು ಇವೆ ಅವುಗಳಲ್ಲಿ ಒಂದಕ್ಕೊಂದು ಒಗ್ಗಟ್ಟು ಇಲ್ಲ, ನಮಗೆ ಬಂದಿರುವ ಪ್ರಕಾರ ಎರಡು ಯೂನಿಟ್‌ಗಳು ಒಂದೇ ಎಂದು ಇನ್‌ಕಂ ಟ್ಯಾಕ್ಸ್‌ನವರು ಸರ್ಟಿಫಿಕೇಟ್ ಕೊಟ್ಟಿದ್ದಾರೆ ಜೊತೆಗೆ ಈ ವಿಷಯ ಹೈಕೋರ್ಟು ಮುಂದೆ ಇದ್ದು ಸ್ಟೇ ಆಗಿ ತಹಸೀಲ್ದಾರ್ ರಿಸೀವರ್ ಆಗಿ ಈ ಲಾಕ್ ಔಟ್ ಏನು ಆಗಿದೆ ಅದರ ಬಗ್ಗೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಅದನ್ನು ಮಾಡುತ್ತಿದ್ದೇವೆ. ಎಲ್ಲಾ